ಮೈಸೂರ ಗಿಜಿಟ.

ನಂ. 12 ಸರ್ಕಾರದಿಂದ ಘಾಯಿಷ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಮಾರ್ಚೀ ತಾ|' 25, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟಿನವರೆ ಇಸ್ತಿಹಾರ್ ನಾಮೆಗಳು. .. .. ಪುಟ 45—48

2ನೇ ಭಾಗ–ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್ ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನಸರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರ್ಟಿಂಡೆಂಟ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟಿಸ್‌ಗಳು. .. 129—139

3ನೇ ಭಾಗ–ಇಂಡ್ಯ ಗವರ್ಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟ್‌ಗಳು. .. ..

4ನೇ ಭಾಗ–ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

ನಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೇ ಪಟ್ಟಿ. .. ..

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 383. ತಾರೀಖು 1ನೇ ಮಾರ್ಚೀ 1876.

ಅರಮನೆ ಇಲಾಖಾ ಪೆರ್ಷದಾರರುಗಳಿಗೆ ಪೆರ್ಷ ಬೆಟವಾಡೇ ಬಗ್ಯೆ ಯೇರ್ಪಡಿಸೋಣಾದ ರೂಲ್ಸ್.

1. ಇದರಡಿ ಬರುವ 3ನೇ ನಿಬಂಧನೆಯ ಷರತ್‌ಗಳನುಸರಿಸಿ ಖುದ್ ಹಾಜರಾಗಬೇಕಾದ್ದಿಲ್ಲವೆಂದು ವಿನಾಯಿಸಲ್ಪಡ ಬಹುದಾದ ಜನಗಳು ಸಿವಾಯಿ ಮೈಸೂರಲ್ಲಿ ವಾಸಮಾಡುವ ಇತರ ದರೋಬಸ್ತು ಪೆರ್ಷದಾರರುಗಳೂ ಮೈಸೂರಲ್ಲಿ ಸಿವಿಲ್ ಪೆರ್ಷ ಪೇ ಮಾಸ್ಟರ್ ಆಫಿಸಿನಲ್ಲಿ ಹಾಜರಾಗಿ ಖುದ್ದು ಪೆರ್ಷ ತೆಗದುಕ್ಕೊಳ್ಳತಕ್ಕದ್ದು. ಸದರೀ ಸಿವಿಲ್ ಪೆರ್ಷ ಪೇ ಮಾಸ್ಟರವರು ಪ್ರತಿ ಸಂವತ್ಸರ ಫಸಮೂರ್ ಏಪ್ರೆಲ್ ಗರ್ರೇ ತಾರೀಖಿಗೆ, ತಾವು ಪೆರ್ಷ ಕೊಟ್ಟ ದರೋಬಸ್ತು ಪೆರ್ಷದಾರರುಗಳನ್ನೂ ತನಖೀನೋಡತಕ್ಕದ್ದು.

2. ಮೈಸೂರ ಷಹರಿನಿಂದ ಆಚಿಗೆ ವಾಸವಾಡುತ್ತಿರುವ ಪೆರ್ಷದಾರರುಗಳಿಗೆ ಆ ಸಮೀಪದ ತಾಲ್ಲೂಕು ಅಮೆಲ್ದಾರರು ಮೊಬಲಗು ಕೊಡತಕ್ಕದ್ದು. ಅಂತಾ ಅಮಲ್ದಾರರಿಗೆ ಸಿವಿಲ್ ಪೆರ್ಷ ಪೇ ಮಾಸ್ಟರಿಂದಾಗಲಿ, ಡಿಸ್ಟ್ರಿಕ್ಟು ಟ್ರೆಜರೀ ಆಫಿಸರಿಂದಾಗಲಿ, ಮೊಬಲಗ್ ಕೊಡತಕ್ಕ ವಿಷಯದಲ್ಲಿ ಬಂದ ಹುಕ್ಕುಂ ಅನುಸರಿಸಿಯೂ, ಪ್ರತಿ ಪೆರ್ಷದಾರನೂ ಪಡೆದಿರುವ ಸರ್ಟಿಫಿಕೇಟ್ ಅನುಸರಿಸಿಯೂ, ಮೊಬಲಗ್ ಕೊಟ್ಟುರುತ್ತೆಂತಲೂ, ಮೋಸಕರವಾಗಿ ವ್ಯಕ್ತಿಭೇದ ಉಂಟಾಗದಂತೆ ಆವಶ್ಯಕವಾದ ಎಲ್ಲ ವಿಧ ನಿಗೇವಾನೀ ಮಾಡಲ್ಪಡುತ್ತೆಂತಲೂ, ನೋಡಿಕೊಳ್ಳುವದು ಅವರ ಕೆಲಸವಾಗಿರುತ್ತೆ. ಪ್ರತಿ ತಾಲ್ಲೂಕು ಅಮಲ್ದಾರ್ರು ಪ್ರತಿ ಸಂವತ್ಸರ ಏಪ್ರೆಲ್ ಗುರ್ರೇ ತಾರೀಖಿಗೆ ಪೆರ್ಷನರ್‌ಗಳನ್ನು ತನಿಖೀ ಮಾಡಿ ವ್ಯಕ್ತಿ ನಿರ್ಣಯಪಡಿಸಿ ಆ ಮೇಲೆ ತಾವು ತನಿಖೀ ಮಾಡಿದ ಪೆರ್ಷದಾರರುಗಳ ಬಂದು ಹೆಸರು ಜಂತ್ರಿಯನ್ನು ಸಿವಿಲ್ ಪೆರ್ಷ ಪೇ ಮಾಸ್ಟರಿಗೆ ಕಳುಹಿಸತಕ್ಕದ್ದು. ಹಾಂಗೆ ಕಳುಹಿಸುವಲ್ಲಿ ಪ್ರತಿ ಪೆರ್ಷದಾರ್‌ಬಗ್ಯೆ ಲೈನ್ ಸರ್ಟಿಫಿಕೇಟ್ ಯಂಬ ಜೀವನಿಶ್ಚಯದ ಸರ್ಟಿಫಿಕೇಟನ್ನು ಸಹಾ ಲಗ್ಗತ್ ಮಾಡತಕ್ಕದ್ದು.

3. ಯಾರ ದರ್ಜೀ ಯಾ ಜಾತಿ ಮರ್ಯಾದೆ ಇಂತಾದ್ದರಿಂದ ಬಹಿರಂಗವಾಗಿ ಹಾಜರಾಗಲಿಕ್ಕೆ ಬಾಧಕವಾಗುತ್ತದೋ ಅಂತಾ ಹೆಂಗಸರಾದ ಪೆರ್ಷದಾರರು ಮತ್ತು ತಮ್ಮ ದರ್ಜೀ ಅಥವಾ ಇತರ ವಿದ್ಯಮಾನಗಳ ದೆಸೇಯಿಂದ ಖುದ್ದು ಹಾಜರಾಗಬೇಕಾದ್ದಿಲ್ಲವೆಂದು ಚೀಫ್ ಕಮ್ಮಿಷನರ್ ಯವರಿಂದ ವಿಶೇಷ್ಯವಾಗಿ ನಿಯಾಮಿಸಲ್ಪಡ ಬಹುದಾಗಿರುತ್ತೋ ಅಂತಾ ಪೆರ್ಷದಾರರು ಕ್ರಮ ಪ್ರಕಾರ ನೇಮಿಸಲ್ಪಟ್ಟ ಮುಖ್ತಾಲೀಕನ ಮೂಲಕ ಮೊಬಲಗ್ ತೆಗದುಕ್ಕೊಳ್ಳತಕ್ಕದ್ದೆಂದು ನೇಮಿಸಲ್ಪಡತಕ್ಕದ್ದು. ಪೆರ್ಷದಾರ್ ಖುದ್ದಾನೇ ಯಿರತಕ್ಕ ಸ್ಥಳದಿಂದ ಅನಾನುಕೂಲವಾವಷ್ಟು ದೂರದಲ್ಲಿ ವಾಸ ಮಾಡುತ್ತಿರುವ ಪಕ್ಷಕ್ಕೆ ಅಮಲ್ದಾರರು ಶೇಕ್ದಾರ್ ವ ಪಟೇಲರ ಮೂಲಕ ಪೆರ್ಷ ಮೊಬಲಗು ಪಾವತೀ ಮಾಡಿಸ ಬಹುದು. ಹಾಂಗೆ ಮಾಡಿಸುವಲ್ಲಿ ಅಂತಾ ಶೇಕ್ದಾರ್ ಯಾ ಪಟೇಲರು ಮೊಬಲಗು ಸಂದದ್ದಕ್ಕೆ ಪೆರ್ಷದಾರ್ರಿಂದ ತೆಗದುಕ್ಕೊಳ್ಳುವ ರಸೀದಿಯ ಮೇಲೆ ಪೆರ್ಷದಾರರಿಗೆ ತಮ್ಮ ರೂಬರೂ ಮೊಬಲಗು ಸಂದಾಯ ಮಾಡಿದೆ ಯಂಬದಾಗಿ ಷರಾ ಬರೆದು ಅಮಲ್ದಾರರಲ್ಲಿ ಹಾಜರ್ ಮಾಡತಕ್ಕದ್ದು. ಅಂತಾ ಸಂದರ್ಭಗಳೊಳಗೆ ಅಮಲ್ದಾರರಾಗಲಿ, ಡಿಸ್‌ಬರ್ಸಿಂಗ್ ಯಾನೆ ಬಟವಾಡೆ ಮಾಡತಕ್ಕ ಆಫಿಸರಾಗಲಿ, ಸರ್ಕಾರಕ್ಕೆ ದುಬಾರೀ ಖರ್ಚು ತಗಲದಂತೆ ಸಾಧ್ಯವಾದ ಎಲ್ಲ ವಿಧ ಜಾಗರೂಕತೆಯನ್ನೂ ವಹಿಸತಕ್ಕದ್ದು. ಮತ್ತು ಪ್ರತಿ ಸಂವತ್ಸರ ಪೊವಲನೇ ತಿಂಗಳ ಪೆರ್ಷ ಸಲ್ಲುವದಕ್ಕೆ ಪೂರ್ವವೇ ಆ ಪೆರ್ಷದಾರನು ಜೀವಿಸಿ ಯಿದ್ದಾನೆಂಬದಕ್ಕೆ ಮೊತ್ರವಲ್ಲದೆ ಅವನು ಖುದ್ದು ಹಾಜರಾಗಲಿಕ್ಕೆ ಕಾಹಿಲೆ ವಗೈರೇ ಸಬಬ್‌ನಿಂದ ವಿನಾಯಿತಿ ಖಾಯಿಷ್ ಮಾಡಲ್ಪಟ್ಟ ಪಕ್ಷಕ್ಕೆ ಹಾಗೆ ಅವನು ಹಾಜರಾಗುವದಕ್ಕೆ ಅಕ್ತನಾಗಿರುವ ಅಂಕದೊಳಗೆ ಸಹಾ ರುಜುವಾತನ್ನು ಆಪೇಕ್ಷಿಸತಕ್ಕದ್ದು. ಸಂದೇಹ ಯಾ ಗುಮಾನೀ ಉಂಟಾದ ದರೋಬಸ್ತು ಸಂಗತಿಗಳನ್ನೂ ಅಮಲ್ದಾರ್ರು ಮೈಸೂರಲ್ಲಿರುವ ಸಿವಿಲ್ ಪೆರ್ಷ ಪೇ ಮಾಸ್ಟರಿಗೆ ಅವರ ಹುಕ್ಕುಂ ಬಗ್ಯೆ ರಿಪೋರ್ಟು ಮಾಡತಕ್ಕದ್ದು.

4. ಪೆರ್ಷ ಬಟವಾಡೇ ಮಾಡತಕ್ಕ ಆಫಿಸರರು ದೊಡ್ಡ ದರ್ಜೀಯಲ್ಲಿರುವ ಪೆರ್ಷದಾರರನ್ನು ರಹಸ್ಯದಲ್ಲಿ ವ್ಯಕ್ತಿ ನಿರ್ಣಯ ಪಡಿಸಿಕ್ಕೊಳ್ಳಬಹುದು. ಮತ್ತು ಸದರೀ ಪೆರ್ಷದಾರ್ರು ರೂಬರೂ ಹಾಜರಾಗಬೇಕಾದ ಜರೂರಿಲ್ಲ.

5. ಬಂದು ಪೆರ್ಷ ಆರ್ಡರ್ಸಿಂಗ್ಸಿಗೆ ಜಾಸ್ತೀಯಾಗಿ ತೆಗದುಕ್ಕೊಳ್ಳದೆ ನಿಂತರೆ ಆ ಬಾಬತು ಪೆರ್ಷೆ ರೊಲನ್ನು ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ಯವರಿಗೆ ವಾಪಸ್ ಮಾಡತಕ್ಕದ್ದಲ್ಲದೆ ಸದರೀ ಪೆರ್ಷ ಸಲ್ಲದೆ ನಿಲ್ಲುತ್ತದೆ. ಪೆರ್ಷದಾರನು ತರುವಾಯ ಹಾಜರಾದಲ್ಲಿ ಸಿವಿಲ್ ಪೆರ್ಷ ಪೇ ಮಾಸ್ಟರು ಪೆರ್ಷ ರೋಲನ್ನು ವಾಪಸ್ ತರಿಸಿಕ್ಕೊಂಡು ಮೊಬಲಗು ಯಥಾಪ್ರಕಾರ ಪಾವತೀ ಮಾಡುತ್ತ ಬರಬಹುದು, ಆದರೆ ಗೈರಾದೇ ಮೊಬಲಗ್ ಮಾತ್ರ ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ಯವರ ಮೂರೀಫತು ಚೀಫ್ ಕಮ್ಮಿಷನರವರ ಸಾಂಕ್ಷರ್ಷ ಪಡೆದ ಹೊರ್ತು ಮೊಬಲಗು ಕೊಡಲ್ಪಡಲಾರದು.

6. ಮೇಲ್‌ಕಂಡ 5ನೇ ರೂಲ್‌ನಲ್ಲಿ ನಮೂದಿಸುವ ಕಾಲದವರಿಗೆ ಮೊಬಲಗ್ ಕೊಡದೆ ನಿಲ್ಲಿಸಿ ಇದ್ದದ್ದು ಯಾವ ಸರ್ಕಾರ ಉದ್ಯೋಗಸ್ಥರ ಗಲ್ಲತ್ ಯಾ ಅಶ್ರದ್ಧೆ ಮೂಲಕ ಉಂಟಾಗಿದ್ದ ಪಕ್ಷಕ್ಕೆ ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ಯವರು ಚೀಫ್ ಕಮ್ಮಿಷನರವರ ಮುಂಜೂರಾತಿಯನ್ನು ಪಡೆಯದೆಯೇ ಪೆರ್ಷ ಗೈರಾದೇ ಕೊಡುವಂತೆ ಹುಕುಂ ಮಾಡಬಹುದು.

7. ಒಬ್ಬ ಪೆರ್ಷದಾರನು ಪೆರ್ಷ ಗೈರಾದೇಯನ್ನು ಹೊಂದಲಿಕ್ಕೆ ಅರ್ಹನಾಗಿದ್ದು, ಮೊಬಲಗು ಸಲ್ಲುವ ಬಗ್ಯೆ ಸಾಂಕ್ಷರ್ಷ ಆಗುವದಕ್ಕೆ ಮುಂಚಿತವಾಗಿಯೇ ಮೃತಪಟ್ಟ ಪಕ್ಷಕ್ಕೆ, ಅವನ ಮರಣಾ ನಂತರ ಆರು ತಿಂಗಳೊಳಗಾಗಿ ಅವನ ವಾರಸ್ದಾರ್ರು ಕೇಳಿಕ್ಕೊಂಡರೆ ಅವರಿಗೆ ಮೊಬಲಗ್ ಪಾವತೀ ಮಾಡಬಹುದು. ಪರಂತು ಆಕಾಲದ ತರುವಾಯ ಚೀಫ್ ಕಮ್ಮಿಷನರವರ ಸಾಂಕ್ಷರ್ಷ ಇಲ್ಲದೆ ಕೊಡಲ್ಪಡಲಾರದು.

8. ಸರ್ಕಾರಕ್ಕೆ ಕೇರಿಹೋದ ಬಾಬತು ಆರವಮನೇ ಇಲಾಖಾ ಪೆರ್ಷಗಳ ಬಂದು ಪಟ್ಟೀಯನ್ನು ಕಳೆದ ಹನ್ನೆರಡು ತಿಂಗಳೊಳಗೆ ಮುಂಜೂರಾದ ಹೊಸ ಪೆರ್ಷಗಳ ಬಾಬತು ಮತ್ತೊಂದು ಪಟ್ಟೀಯನ್ನು ಸಹ ಸಿವಿಲ್ ಪೆರ್ಷ ಪೇ ಮಾಸ್ಟರು, ಚೀಫ್ ಕಮ್ಮಿಷನರವರ ಆಫಿಸಿಗೆ ಸಾಲೀಯಾನಾ ಕಳುಹಿಸತಕ್ಕದ್ದು. ಸದರೀ ಎರಡು ಪಟ್ಟೀಗಳೂ ಏಪ್ರೆಲ್ ಗುರ್ರೇ ವರಿಗೆ ತಯಾರಾಗತಕ್ಕದ್ದು, ಮತ್ತು ಅವುಗಳ ಬಾಬತು ಬಂದು ನಕ್ಕಲನ್ನು ಅದೇ ಕಾಲದಲ್ಲಿ ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ ರವರಿಗೂ ಕಳುಹಿಸತಕ್ಕದ್ದು.

ನಂ. 389. ತಾರೀಖು 13ನೇ ಮಾರ್ಚೀ 1876.

ಬಳ್ಳಾರೀ ಡಿಸ್ಟ್ರಿಕ್ಟು ಪೈಕೀ ಹಂಪೆ ಯೆಂಬ ಸ್ಥಳದಲ್ಲಿ ಅಥವಾ ಅದರ ಆಸ್ ಪಾಸ್ ಪ್ರದೇಶಗಳಲ್ಲಿ ಉಖಾಲ್ ಜ್ವಾಲಾಬ್ ಉಪದ್ರವ ವ್ಯಾಪಿಸಿ ಯಿರುವದಾಗಿ ವರ್ತಮಾನ ಬಂದಿರುವದರಿಂದ, 1876ನೇ ಇಸವಿ ಏಪ್ರೆಲ್ 8ನೇ ತಾರೀಖಿನಲ್ಲಿ ನಡೆಯುವ ಜಾತ್ರೆಗೆ ಹೋಗಬೇಕೆಂದು ಉದ್ದೇಶಿಸುವ ದಕೋಬಸ್ತು ಜನಗಳೂ, ಆ ಸ್ಥಳಕ್ಕೆ ಹೋಗೋಣದರಿಂದ ತಮಗೆ ಸಂಭವಿಸತಕ್ಕ ಅಪಾಯವನ್ನು ಕುರಿತು ಇದರ ದೆಸೆಯಿಂದ ಎಚ್ಚರಿಸಲ್ಪಟ್ಟಿರುತ್ತಾರೆ.

ನಂ. 396. ತಾರೀಖು 16ನೇ ಮಾರ್ಚೀ 1876.

ಇದರಿಂದ ಪ್ರಸಿದ್ಧ ಪಡಿಸುವದೇನಂದರೆ,—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ವ ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಬಿದರಿನ ಮೇಲೆ ವಸೂಲಾಗುವ ಸೀನೀಯರೇಜ್ ತೀರ್ವೆಯು ಭಂಡೀ ಜೋಡೆ 1ಕ್ಕೆ $2\frac{1}{2}$ ರೂಪಾಯಿ ಇದ್ದದ್ದನ್ನು $1\frac{1}{4}$ ರೂಪಾಯಿಗೆ ಕಮ್ಮೀ ಮಾಡಲ್ಪಟ್ಟಿದೆ.

ನಂ. 398. ತಾರೀಖು 17ನೇ ಮಾರ್ಚೀ 1876.

ಮೆ॥ ಟಿ. ಆನಂದರಾಯರು ಸಬ್ ಡಿವೀಜ್ಞ ಹೆಡ್‌ಕ್ವಾರ್ಟ್ರಿನ ಮತ್ತು ಫಸ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟಿನ ಚಾರ್ಜ್ ನ್ನು ಕೆಪ್ಟ್ ಲಫ್ಟೋನಾಹೆಬರಿಗೆ, 1876ನೇ ಯಿಸವಿ ಫಿಬ್ರವರೀ 29ನೇ ಮರ್ತ್ತುಮಿನ ಮಧ್ಯಾನ್ಹಾತ್ಪರ ಕೊಟ್ಟರು.

ನಂ 399. ತಾರೀಖು 17ನೇ ಮಾರ್ಚೀ 1876.

ಅಟ್ಟಾಚೆ ಮೆ॥ ಮಾದೈಯನವರು ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರೀ ಚಾರ್ಜ್‌ನ್ನು ಮೆ॥ ಆನಂದರಾಯರವರಿಂದ, 1876ನೇ ಯಿಸವಿ ಮಾರ್ಚೀ 2ನೇ ಮರ್ತ್ತುಮಿನ ಪೂರ್ವಾನ್ಹದಲ್ಲಿ ವಹಿಸಿದರು.

ನಂ. 400. ತಾರೀಖು 18ನೇ ಮಾರ್ಚೀ 1876.

ಚೀಫ್ ಕಮ್ಮಿಷನರ್ ಸಾಹೆಬರವರ ಆಫಿಷಿಯೇಟಿಂಗ್ ಸೆಕ್ರಟೆರಿಯವರಾದ ಮೇಜರ್ ಟಿ. ಕ್ಲಾರ್ಕ್ ಸಾಹೆಬರಿಗೆ, 1876ನೇ ಇಸವಿ ಏಪ್ರೆಲ್ 3ನೇ ಮರ್ತ್ತುಂ ಲಾಗಾಯತು, ಅಥವಾ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿದೆ.

ಅಸಿಸ್ಟೆಂಟ್ ಕಮ್ಮಿಷನರ್ ಕೆಪ್ಟ್ ಮೆಕ್ಕೆಂಜಿ ಸಾಹೆಬರು, ಮೇಜರ್ ಕ್ಲಾರ್ಕ್ ಸಾಹೆಬರವರ ಗೈರ್ ಹಾಜರೀಯಲ್ಲಿ, ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಚೀಫ್ ಕಮ್ಮಿಷನರ್ ಸಾಹೆಬರವರ ಸೆಕ್ರಟೆರಿ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್.

ನಂ. 401. ತಾರೀಖು 20ನೇ ಮಾರ್ಚೀ 1876.

ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೇಜರ್ ಲೋರ್ಡ್ ಸಾಹೆಬರಿಗೆ ಫರಲೋ ರಜಾದ ಮೇಲೆ ವಿಲಾಯಿತಿಗೆ ಹೋಗುವದಕ್ಕೋಸ್ಕರ 30 ದಿನಗಳ ಸಬ್ ಸಿಡಿಯೇರೀ ರಜಾ ಕೊಡಲ್ಪಟ್ಟಿರುತ್ತೆ.

ನಂ. 402. ತಾರೀಖು 20ನೇ ಮಾರ್ಚೀ 1876.

ಮೇಜರ್ ವೊಟ್ಟಿಟ್ ಸಾಹೆಬರಿಗೆ 1872ನೇ ಇಸವಿ 10ನೇ ನಂಬರ್ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ ನಿಬಂಧನೆಗಳನು ಸಾರವಾಗಿ 35ನೇ ಸೆಕ್ಷನ್ ಅರ್ಥ ರೀತ್ಯಾ ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್ ಅಧಿಕಾರಗಳೂ, ಮತ್ತು 36ನೇ ಸೆಕ್ಷನ್ ಅನುಸರಿಸಿ ಜಾಸ್ತೀ ಅಧಿಕಾರಗಳೂ ಸಹಾ ಕೊಡಲ್ಪಟ್ಟಿರುತ್ತವೆ.

ನಂ. 403. ತಾರೀಖು 21ನೇ ಮಾರ್ಚೀ 1876.

ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮೇಜರ್ ಏರಸ್ ಸಾಹೆಬರಿಗೆ 1876ನೇ ಇಸವಿ ಮಾರ್ಚೀ 31ನೇ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 2 ತಿಂಗಳೂ 2 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತುಮಕೂರು ಡಿಸ್ಟ್ರಿಕ್ಟು ಸ್ಪೆಷಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಪೋರ್ಬ್ಸ್ ಯಸ್ ಸಾಹೆಬರು ಮೇಜರ್ ಪರಸ್ ಸಾಹೆಬರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟೆ ಕಮ್ಮಿಷನರ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್.

ತಾರೀಖು 21ನೇ ಮಾರ್ಚೀ 1876.

ನಂ. 404. 1ನೇ ಕ್ಲಾಸ್ ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಕೆಪ್ಟ್ ಲಡ್ಲೋ ಸಾಹೆಬರು, ಮೇಜರ್ ಪರಸ್ ಸಾಹೆಬರು ಪ್ರಿವಿಲೀಜ್ ರಜಾದ ಮೇಲೆ ಹೋಗುವ ತಾರೀಖು ಲಾಗಾಯತು ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟೆ ಕಮ್ಮಿಷನರ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ಮಾಡಲ್ಪಟ್ಟ ರುತ್ತಾರೆ.

ತಾರೀಖು 22ನೇ ಮಾರ್ಚೀ 1876.

ನಂ. 405. ಫಸ್ಟ್‌ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್ ಮೇಜರ್ ಲಿಂಡ್ಸೆ ಸಾಹೆಬರಿಗೆ ಸ್ ೧೮೭೬ನೇ ಇಸವಿ ಜನವರೀ 19ನೇ ಮುಕ್ತುಂ ಲಾಗಾಯತು ಫಿಬ್ರವರೀ ಗುರ್ಯೇ ತಾರೀಖು ವರಿಗೂ ಸಬ್ ಸಿಡಿಯೇರಿ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಮಾರ್ಚೀ 1876.

ನಂ. 406. ಫೂರ್ಟ್ ಡಿ|| ಇಂಡ್ಯ ಗವರ್ಮೆಂಟ್ ಸೆಕ್ರಿಟರಿಯವರಿಂದ ಬಂದ 1873ನೇ ಇಸವಿ ಮಾರ್ಚೀ 12ನೇ ಮುಕ್ತುಂ 619ನೇ G ನಂಬರ್ ಲೆಟರಿನಲ್ಲಿ ತಿಳಿಸಲ್ಪಟ್ಟ ಅಪ್ಪಣೆ ಅನುಸರಿಸಿ ಆಟೂಜೆ ಮೆಸ್ಟರ್ ಮಾಡೈಯನವರು, ಹಂಗಾಮೀಯಾಗಿ ಖಾಲೀ ಇರುವ ಕೆಲಸಕ್ಕೆ ಭರ್ತೀಯಾಗಿ 6ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ಮಾಡಿರುತ್ತಾರೆ.

ತಾರೀಖು 23ನೇ ಮಾರ್ಚೀ 1876.

ನಂ. 407. ಬೆಂಗಳೂರು ಡಿ|| ಆಫಿಷಿಯೇಟಿಂಗ್ ಆ|| ಕಮ್ಮಿಷನರ್ ಮೆ|| ಆನಂದರಾಯರಿಗೆ, ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಾಗಾಯತು, ಮೆಡಿಕೆಲ್ ಸರ್ಟಿಫಿಕೇಟ್ ಮೇಲೆ 14 ದಿನಗಳ ರಜಾ ಮುಂಜೂರ್ ಆಗಿರುತ್ತೆ.

ತಾರೀಖು 23ನೇ ಮಾರ್ಚೀ 1876.

ನಂ. 408. ಮೆಸ್ಟರ್ ಆನಂದರಾಯರು, ಕ್ಲೋಸ್‌ಪೇಟೆ ಸಬ್ ಡಿವೀಜ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು ಚಾರ್ಜನ್ನು 1876ನೇ ಫಿಬ್ರವರೀ 29ನೇ ಮುಕ್ತುಂ ಮಧ್ಯಾನ್ಹಾತ್ಪರ ಕೆಪ್ಟ್ ಲಡ್ಲೋಯವರಿಂದ ತೆಗದುಕ್ಕೊಂಡಿರುತ್ತಾರೆ.

ತಾರೀಖು 23ನೇ ಮಾರ್ಚೀ 1876.

ನಂ. 409. ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ಸಬ್ ಡಿವೀಜ್ ಇನ್‌ಚಾರ್ಜ್ ಆ|| ಕಮ್ಮಿಷನರ್ ಮೆ|| ನರಸಿಂಹ್ಮಯ್ಯಂಗಾರ್‌ಯವರಿಗೆ, 1872ನೇ ಇಸವಿಯ 10ನೇ ಆಕ್ಟಿನ 19ನೇ ಸೆಕ್ಷನ್ ಆರ್ಥರೀತ್ಯಾ 2ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಮತ್ತು ವಿಚಾರಣೆ ಬಗ್ಯೆ ಕಮ್ಮಿಟ್ ಮಾಡುವ ಅಧಿಕಾರ ಸಹ ಕೊಡಲ್ಪಟ್ಟಿರುತ್ತವೆ.

"ಬಮೋಜೀಬ್ ಹುಕ್ಕುಂ,"

T. CLARKE,
Offg. Secretary.

ಪಬ್ಲಿಕ್ ವರ್ಕ್ಸ್.

ತಾರೀಖು 23ನೇ ಮಾರ್ಚೀ 1876.

ನಂ. 129. ಸ್ ೧೮೭೬ನೇ ಇಸವಿ ಅಕ್ಟೋಬರ್ ಮಾಹೆ 26ನೇ ಮುಕ್ತುಂ 83ನೇ ನಂಬರ್ ಇಸ್ತಿಹಾರ್‌ನಲ್ಲಿ ಕಡೂರು ಡಿಸ್ಟ್ರಿಕ್ಟು 2ನೇ ಕ್ಲಾಸ್ ಮುಸಾಫರ್ ಬಂಗ್ಲೆಯಂಬದಾಗಿ ಮಾಡಲ್ಪಟ್ಟ ಲಿಂಗನಹಳ್ಳಿ ಪಬ್ಲಿಕ್ ಬಂಗ್ಲೆಯು 3ನೇ ಕ್ಲಾಸ್ ಬಂಗ್ಲೆಯಾಗಿ ಮಾಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ,"

W. R. JOHNSON, *Lieut-Col.*,
Offg. Secretary, P. W. D.